ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಎರಡು ಹವಾನಿಯಂತ್ರಿತ ಬಸ್ಸುಗಳನ್ನು ಮೊದಲಿಗೆ ಬೆಂಗಳೂರು-ಮಂಗಳೂರು ನಡುವೆ ಕಾರ್ಯಾಚರಣೆ ಮಾಡಲು ಯೋಜಿಸಿದೆ. ಈ ಕಾರ್ಯಾಚರಣೆ ಮಾಡಲು ಯೋಜಿಸಿದೆ. ಈ ಕಾರ್ಯಾಚರಣೆಯ ಸೂಕ್ತತೆಯ ಆಧಾರದ ಮೇಲೆ ಉಳಿದ ಮಾರ್ಗಗಳನ್ನು ಅಳವಡಿಸಲಾಗುವುದು.

ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ಸರ್ಕಾರದ ನಿರ್ದೇಶನ ಪಾಲಿಸದಿರುವುದು

4894 - ಶ್ರೀ ಎಸ್.ಎ. ರವೀಂದ್ರನಾಥ್ (ಮಾಯಗೊಂಡ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ ದೊಡ್ಡಬಾತಿ ಇದರ 53 ಕಾರ್ಮಿಕರ ಬಗ್ಗೆ ದಿನಾಂಕ 14-05-1998 ರಂದು ಆದಂತಹ ಒಪ್ಪಂದದ ಜಾರಿಗಾಗಿ ಸಕ್ಕರೆ ನಿರ್ದೇಶಕರು ದಿನಾಂಕ 18-08-1998 ರಂದು ಕೊಟ್ಟಂತಹ ನಿರ್ದೇಶನವನ್ನು ಸದರಿ ಕಾರ್ಖಾನೆಯವರು ಜಾರಿಗೊಳಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಜಾರಿಗೊಳಿಸದೆ ಇರುವುದಕ್ಕಾಗಿ ಮತ್ತು ನಿರ್ದೇಶನವನ್ನು ಕಡೆಗಾಣಿಸಿರುವುದಕ್ಕೆ ಸದರಿ ಕಾರ್ಖಾನೆಯವರ ಮೇಲೆ ತೆಗೆದುಕೊಂಡಿರುವ ಕ್ರಮಗಳೇನು?*

ಇ) *ಸರ್ಕಾರದ ಸಾಲ ಸೌಲಭ್ಯಗಳ ಮೇಲೆ ಸ್ಥಾಪಿತವಾಗಿರುವ ಮತ್ತು ನಡೆಯುತ್ತಿರುವ ಈ ಕಾರ್ಖಾನೆಯ ಆಡಳಿತದವರ ಕ್ರಮ ಸರ್ಕಾರವನ್ನು ಹಗುರವಾಗಿ ಕಂಡಂತಾಗಿರುವುದಲ್ಲವೆ?*

ಈ) *ಹೌದಾದಲ್ಲಿ ಈ ಬಗ್ಗೆ ಸರ್ಕಾರವು ತೆಗೆದುಕೊಂಡಿರುವ ಮತ್ತು ತೆಗೆದುಕೊಳ್ಳುವ ಕ್ರಮಗಳೇನು?*

ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರ ಸಚಿವರು) :

ಅ) ಬಂದಿದೆ.

ಆ) ಕಾರ್ಖಾನೆಯವರು ಮಾನ್ಯ ಉಚ್ಚ ನ್ಯಾಯಾಲಯದ ನಿರ್ದೇಶನದಂತೆ 53 ಮಂದಿ ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಂಡಿರುತ್ತಾರೆ. ಆದುದರಿಂದ ಕಾರ್ಖಾನೆಯವರ ಮೇಲೆ ಕ್ರಮ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಹುಲಸೂರು ಮತಕ್ಷೇತ್ರದಲ್ಲಿ ಕರ್ನಾಟಕ ಗೃಹ ಮಂಡಳಿಯ ಯೋಜನೆಗಳು

4896 - ಶ್ರೀ ರಾಜೇಂದ್ರ ವರ್ಮ (ಹುಲಸೂರು) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹುಲಸೂರು ವಿಧಾನ ಸಭಾ ಕ್ಷೇತ್ರದಲ್ಲಿ ಕರ್ನಾಟಕ ಗೃಹ ಮಂಡಳಿಯ ಯಾವ ಯಾವ ಯೋಜನೆಗಳು ಪ್ರಗತಿಯಲ್ಲಿವೆ?*